**ಎಚ್.ಎಸ್. ವೆಂಕಟೇಶಮೂರ್ತಿ**
ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಹೋದಿಗೆರೆ ಗ್ರಾಮದವರು. ಬೆಂಗಳೂರಿನ ಸೇಂಟ್ ಜೋಸೆಫ್ಸ್ ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದು, ಈಗ ನಿವೃತ್ತರು.

ಪರಿವೃತ್ತ, ಸಿಂದಾಬಾದನ ಆತ್ಮಕಥೆ, ಕ್ರಿಯಾಪರ್ವ, ಒಣಮರದ ಗಿಳಿಗಳು, ಎಷ್ಟೊಂದು ಮುಗಿಲು, ಅಮೆರಿಕದಲ್ಲಿ ಬಿಲ್ಲುಹಬ್ಬ, ನದೀತೀರದಲ್ಲಿ, ಉತ್ತರಾಯಣ ಮತ್ತು..., ಕನ್ನಡಿಯ ಸೂರ್ಯ, ವೈದೇಹಿ, ಶಫೀಲ್ಡ್ ಕವಿತೆಗಳು, ಅವರ ಕೆಲವು ಮುಖ್ಯ ಕಾವ್ಯಕೃತಿಗಳು. ಅಗ್ನಿವರ್ಣ, ಚಿತ್ರಪಟ, ಉರಿಯ ಉಯ್ಯಾಲೆ, ಮಂಥರೆ ಜನಪ್ರಿಯ ನಾಟಕಗಳು. 'ಈ ಮುಖೇನ' ವೈಚಾರಿಕ ಪ್ರಬಂಧಗಳ ಸಂಕಲನ. ಅನಾತ್ಮಕಥನ, ಅಕ್ಕಚ್ಚುವಿನ ಅರಣ್ಯಪರ್ವ, ಆತ್ಮಕಥನಾತ್ಮಕ ಬರಹಗಳು. ತಾಪಿ, ವೇದವತಿ ನದಿಯಲ್ಲ ಕಾದಂಬರಿಗಳು. ಮಕ್ಕಳ ಸಾಹಿತ್ಯ ರಚನೆಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕಾರವನ್ನೂ ಕಾಳಿದಾಸನ ಋತುಸಂಹಾರದ ಅನುವಾದ 'ಋತುವಿಲಾಸ'ಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಫೆಬ್ರುವರಿ 5ರಿಂದ 7ರವರೆಗೆ ಕಲಬುರ್ಗಿಯಲ್ಲಿ ನಡೆಯುವ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಎಚ್.ಎಸ್.ವಿ. ಸಾಹಿತ್ಯಯಾನದ ಮತ್ತೊಂದು ಮೈಲಿಗಲ್ಲು.

ಎಚ್.ಎಸ್.ವಿ. ಕವಿಸಮಯ
https://bit.ly/35kPqJK
ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ನಮ್ಮೂರಿನ ಪಕ್ಕದೂರು. ಅಲ್ಲಿ ಕ್ರಾಫ್ಟ್ ಟೀಚರ್ ಕೆಲಸ ಖಾಲಿ ಇದೆ ಅಂತ ಗೊತ್ತಾಯ್ತು, ಅಪ್ಲೈ ಮಾಡಿದೆ. ರಾಘವೇಂದ್ರ ಸ್ವಾಮೀಜಿ (ತಿರುಕ) ಅಂತಿದ್ದರು. ಗಾಂಧಿಯವರ ಪ್ರಭಾವ ಹೊಂದಿದ್ದ ಅವರು ಹಳ್ಳಿಯಲ್ಲಿ ಶಾಲೆಯನ್ನು ನಡೆಸುತ್ತಿದ್ದರು. ಸಂದರ್ಶನದಲ್ಲಿ ಅವರು ನನ್ನ ಅಭಿರುಚಿಯ ಬಗ್ಗೆ ಕೇಳಿದರು. 'ಸಾಹಿತ್ಯ ನನಗಿಷ್ಟ. ನೀವು ಬರೆದ ಪುಸ್ತಕಗಳನ್ನೂ ಓದಿದ್ದೇನೆ' ಎಂದೆ. ತಕ್ಷಣವೇ ಅವರು, 'ಹಾಗಾದ್ರೆ ತಗೋತೀನಿ ಬಿಡು ನಿನ್ನನ್ನು' ಎಂದರು. ಸಾಹಿತ್ಯದ ಪ್ರೀತಿ ನನ್ನನ್ನು ಉದ್ಧಾರ ಮಾಡಿತು.

ಬಹಳ ಶಿಸ್ತಿನ ಶಾಲೆ ಅದು. ಅಲ್ಲಿ ಏಳು ವರ್ಷ ಇದ್ದೆ. ಐದು ವರ್ಷ ಕೆಲಸ. ಎರಡು ವರ್ಷ ಎಂ.ಎ. ಮಾಡಲಿಕ್ಕಾಗಿ ಸಂಬಳರಹಿತ ರಜೆ ತೆಗೆದುಕೊಂಡಿದ್ದೆ. ಆ ವೇಳೆಗಾಗಲೇ ನನಗೆ ಮದುವೆಯಾಗಿತ್ತು. ಮೂವರು ಮಕ್ಕಳಿದ್ದರು. 'ಪರ್ಮನೆಂಟ್ ಕೆಲಸ ಯಾಕೆ ಬಿಟ್ಟು ಹೋಗ್ತೀಯ' ಎಂದು ಎಲ್ಲರೂ ಬುದ್ಧಿ ಹೇಳಿದರು. ಆದರೆ, ಏನೋ ಹಟ. ಕನ್ನಡ ಮೇಷ್ಟ್ರಾಗಬೇಕು ಎನ್ನುವ ಆಸೆ. ಹೆಂಡತಿ ಮಕ್ಕಳನ್ನು ಅಮ್ಮನ ಬಳಿಗೆ ಬಿಟ್ಟು ಬೆಂಗಳೂರಿಗೆ ಬಂದೆ. ಮಲ್ಲಾಡಿಹಳ್ಳಿಯಲ್ಲಿದ್ದಾಗಲೇ, ಧಾರವಾಡದಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಬಿ.ಎ. ಮಾಡಿದ್ದೆ. ಮೈಸೂರಿನಲ್ಲಿ ಎಂ.ಎ.ಗೆ ಪ್ರವೇಶ ದೊರೆಯಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಬಾಹ್ಯ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವ ಅವಕಾಶ ಇರಲಿಲ್ಲ. ಆದರೂ ನಾನು ಅರ್ಜಿ ಸಲ್ಲಿಸಿದ್ದೆ. ಒಂದು ದಿನ ಒಂದು ಪತ್ರ ಬಂತು. ಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಬರೆದ ಪತ್ರವದು. 'ನೀವು ಎಂ.ಎ.ಗೆ ಪ್ರಯತ್ನಿಸುತ್ತಿರುವ ವಿಷಯ ತಿಳಿಯಿತು. ನಾನು ಜಿ.ಎಸ್. ಶಿವರುದ್ರಪ್ಪನವರನ್ನು ನಿಮಗೆ ಪರಿಚಯಿಸುತ್ತೇನೆ. ನಿಮಗೆ ಸೀಟ್ ಸಿಗಲಿಕ್ಕೆ ಪ್ರಯತ್ನಿಸೋಣ. ನೀವು ಎಂ.ಎ. ಮಾಡಬೇಕು. ಸಂಕೋಚಪಡದೆ ಹೊರಟುಬನ್ನಿ' ಎಂದು ಬರೆದಿದ್ದರು. ಆ ವೇಳೆಗೆ ನನ್ನ 'ಪರಿವೃತ್ತ' ಸಂಕಲನ ಪ್ರಕಟಗೊಂಡಿತ್ತು. ಅದು ಜಿ.ಎಸ್.ಎಸ್. ಅವರಿಗೂ ಇಷ್ಟವಾಗಿತ್ತು. ಲಕ್ಷ್ಮೀನಾರಾಯಣ ಭಟ್ಟರು ನನ್ನ